# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1380 |
| 2. | ಸದಸ್ಯರ ಹೆಸರು | : ಡಾ: ಉಮಾಶ್ರೀ (ನಾಮನಿರ್ದೇಶಿತರು) |
| 3. | ಉತ್ತರಿಸಬೇಕಾದ ದಿನಾಂಕ | : 18-12-2025 |
| 4. | ಉತ್ತರಿಸುವ ಸಚಿವರು | : ಮಾನ್ಯ ಮುಖ್ಯಮಂತ್ರಿಯವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಲೋಕಾಯುಕ್ತ ಸಂಸ್ಥೆಯು ಹೆಚ್ಚುವರಿ ಹುದ್ದೆ, ಮಂಜೂರಾತಿ, ಭತ್ಯೆ ಹೆಚ್ಚಳ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆಗಳನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದೂವರೆಗೂ ಎಷ್ಟು ಪ್ರಸ್ತಾವನೆಗಳು ಸ್ವೀಕೃತವಾಗಿದೆ; ಅದರಲ್ಲಿ ಎಷ್ಟು ಪ್ರಸ್ತಾವನೆಗಳು ಅನುಮೋದಿಸಲ್ಪಟ್ಟಿದೆ; ಬಾಕಿ ಉಳಿದ ಪ್ರಸ್ತಾವನೆಗಳನ್ನು ಯಾವಾಗ ಅನುಮೋದಿಸಲ್ಪಡುವುದು?</td><td>ಹೌದು. ಲೋಕಾಯುಕ್ತ ಸಂಸ್ಥೆಯಿಂದ ಹೆಚ್ಚುವರಿ ಹುದ್ದೆ, ಮಂಜೂರಾತಿ ಭತ್ಯೆ, ಹೆಚ್ಚಳಕ್ಕೆ ಸಂಬಂಧಿಸಿದಂತೆ ಸ್ವೀಕೃತವಾದ, ಅನುಮೋದಿಸಲ್ಪಟ್ಟ ಹಾಗೂ ಬಾಕಿಯಿರುವ ಕಡತಗಳ ವಿವರ ಕೆಳಕಂಡಂತಿದೆ:
<table>
<tr><th>ಕ್ರ. ಸಂ.</th><th>ವಿವರ</th><th>ಸ್ವೀಕೃತಗೊಂಡ ಪ್ರಸ್ತಾವನೆಗಳ ಸಂಖ್ಯೆ</th><th>ಅನುಮೋದಿಸಲ್ಪಟ್ಟ ಪ್ರಸ್ತಾವನೆಗಳ ಸಂಖ್ಯೆ</th><th>ಬಾಕಿ ಉಳಿದಿರುವ ಪ್ರಸ್ತಾವನೆಗಳ ಸಂಖ್ಯೆ</th></tr>
<tr><td>1</td><td>ಹೆಚ್ಚುವರಿ ಹುದ್ದೆ ಮಂಜೂರಾತಿ</td><td>3</td><td>-</td><td>3</td></tr>
<tr><td>2</td><td>ಭತ್ಯೆಹೆಚ್ಚಳ</td><td>2</td><td>2</td><td>-</td></tr>
<tr><td></td><td>ಒಟ್ಟು</td><td>5</td><td>2</td><td>3</td></tr>
</table>
ದಿನಾಂಕ:01.01.2025 ರಿಂದ ಇಂದಿನವರೆಗೆ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಿಂದ ಹೆಚ್ಚುವರಿ ಹುದ್ದೆಗಳ ಮಂಜೂರಾತಿ ಸಂಬಂಧ 03 ಪ್ರಸ್ತಾವನೆಗಳು ಹಾಗೂ ಭತ್ಯೆ ಹೆಚ್ಚಳದ ಸಂಬಂಧ 02 ಪ್ರಸ್ತಾವನೆಗಳು ಸೇರಿ ಒಟ್ಟು 05 ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತವೆ. ಹೆಚ್ಚುವರಿ ಹುದ್ದೆಗಳ ಮಂಜೂರಾತಿಗೆ ಸಂಬಂಧಿಸಿದ 3 ಪ್ರಸ್ತಾವನೆಗಳು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತವೆ. ಭತ್ಯೆ ಹೆಚ್ಚಳಕ್ಕೆ ಸಂಬಂಧಿಸಿದ 2 ಪ್ರಸ್ತಾವನೆಗಳಿಗೆ ಆರ್ಥಿಕ ಇಲಾಖೆಯು ಸಹಮತಿಸಿದ್ದು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಆದೇಶ ಹೊರಡಿಸಲಾಗಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.</td></tr>
</table>

**ಕಡತ ಸಂ:ಆಇ 1038 ವೆಚ್ಚ-12/2025.**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ

<u>ಅನುಬಂಧ</u>

**ಹೆಚ್ಚುವರಿ ಹುದ್ದೆ ಮಂಜೂರಾತಿ ಕುರಿತು ಕರ್ನಾಟಕ ಲೋಕಾಯುಕ್ತ ಸಂಸ್ಥೆಯಿಂದ ಸ್ವೀಕೃತವಾಗಿ ಆರ್ಥಿಕ ಇಲಾಖೆಯ ಅಭಿಪ್ರಾಯ ಕೋರಿ ಮಂಡಿಸಿರುವ ಪ್ರಸ್ತಾವನೆಗಳು**

| ಕ್ರಮ ಸಂಖ್ಯೆ | ಪ್ರಸ್ತಾವನೆಯ ವಿವರ |
|---|---|
| 1 | ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ವಿವಿಧ ವೃಂದದ ಒಟ್ಟು 339 ಹುದ್ದೆಗಳನ್ನು ಸೃಜಿಸುವ ಕುರಿತು.<br>(ಕಡತ ಸಂಖ್ಯೆ: ಸಿಆಸುಇ 181 ಸೇಲೋಯು 2024) |
| 2 | ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಕಾನೂನು ಕೋಶಕ್ಕೆ ವಿವಿಧ ವೃಂದದ ಒಟ್ಟು 12 ಹುದ್ದೆಗಳನ್ನು ಮಂಜೂರು ಮಾಡುವ ಕುರಿತು.<br>(ಕಡತ ಸಂಖ್ಯೆ: ಸಿಆಸುಇ 242 ಸೇಲೋಯು 2024) |
| 3 | ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಆಂತರಿಕ ನಿಗಾ ಘಟಕಕ್ಕೆ ವಿವಿಧ ವೃಂದದ ಒಟ್ಟು 8 ಹುದ್ದೆಗಳನ್ನು ಮಂಜೂರು ಮಾಡುವ ಕುರಿತು.<br>(ಕಡತ ಸಂಖ್ಯೆ: ಸಿಆಸುಇ 57 ಸೇಲೋಯು 2025) |

**<u>ಭತ್ಯೆ ಹೆಚ್ಚಳಕ್ಕೆ ಸಂಬಂಧಿಸಿದಂತೆ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಿಂದ ಸ್ವೀಕೃತವಾದ ಪ್ರಸ್ತಾವನೆಗಳು</u>**

1. ಹಿಂದಿನ ಗೌರವಾನ್ವಿತ ಲೋಕಾಯುಕ್ತರುಗಳಾದ ನ್ಯಾಯಮೂರ್ತಿ ಶ್ರೀ ಎನ್. ಸಂತೋಷ ಹೆಗಡೆ ಮತ್ತು ನ್ಯಾಯಮೂರ್ತಿ ಪಿ.ವಿಶ್ವನಾಥ ಶೆಟ್ಟಿ ಇವರು The Supreme Court Judges Rules, 1959 ರ ನಿಯಮಕ 3(ಬಿ)(1)ರ ಪ್ರಕಾರ ಒದಗಿಸುತ್ತಿರುವ ಸೌಲಭ್ಯಗಳಿಗಾಗಿ ಪಾವತಿಸುತ್ತಿರುವ ಮೊತ್ತ ರೂ.70,000/- ಗಳನ್ನು ರೂ.1,22,000/- ಗಳಿಗೆ ಹೆಚ್ಚಿಸುವಂತೆ ಕೋರಲಾಗಿತ್ತು. ಈ ಸಂಬಂಧ **ಆರ್ಥಿಕ ಇಲಾಖೆಯ ಸಹಮತಿಯನ್ವಯ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 122 ಸೇಲೋಯು 2022, ದಿನಾಂಕ: 06.12.2025 ರನ್ವಯ ರೂ.70,000/- ಗಳಿಂದ ರೂ.1,22,000/-ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ. (ಪ್ರತಿ ಲಗತ್ತಿಸಿದೆ.)**

2. ಗೌರವಾನ್ವಿತ ಉಪಲೋಯುಕ್ತರವರು ಮತ್ತೊಂದು ಉಪಲೋಕಾಯುಕ್ತರವರ ಹುದ್ದೆ ಖಾಲಿ ಇರುವ ಸಂದರ್ಭಗಳಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 7(4)ರ ಅಡಿಯಲ್ಲಿ ಆ ಹುದ್ದೆಯ ಪ್ರಭಾರವನ್ನು ವಹಿಸಿಕೊಂಡು ಹೆಚ್ಚಿನ ಜವಾಬ್ದಾರಿ ಹೊತ್ತು ಕರ್ತವ್ಯ ನಿರ್ವಹಿಸಿದಾಗ ಅವರಿಗೆ **ಪ್ರಭಾರ ಭತ್ಯೆಯನ್ನು ನೀಡುವ ಅವಕಾಶವನ್ನು ಕರ್ನಾಟಕ ಲೋಕಾಯುಕ್ತ ನಿಯಮಗಳು, 1985ರ ನಿಯಮ 6ರಲ್ಲಿ ಕಲ್ಪಿಸಿ, ದಿನಾಂಕ: 03.11.2025ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ.** (ಪ್ರತಿ ಲಗತ್ತಿಸಿದೆ)

# <u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:** ಗೌರವಾನ್ವಿತ ಹಿಂದಿನ ಲೋಕಾಯುಕ್ತರುಗಳಾದ ನ್ಯಾಯಮೂರ್ತಿ ಶ್ರೀ ಎನ್. ಸಂತೋಷ್ ಹೆಗಡೆ ಮತ್ತು ನ್ಯಾಯಮೂರ್ತಿ ಶ್ರೀ ಪಿ. ವಿಶ್ವನಾಥಶೆಟ್ಟಿ ಇವರುಗಳಿಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶಗಳನ್ವಯ ಸೌಲಭ್ಯಗಳನ್ನು ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ :**

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 150 ಸೇಲೋಯು 2011, ದಿನಾಂಕ:02.12.2011
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 89 ಸೇಲೋಯು 2021, ದಿನಾಂಕ: 16.02.2022.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 22 ಸೇಲೋಯು 2022, ದಿನಾಂಕ; 21.04.2022.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ಎಸಿಟಿ-6/ಗೃ.ಪ.ಭ/ 17/2022-23, ದಿನಾಂಕ:03.11.2022.
5. ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ 122 ಸೇಲೋಯು 2022, ದಿನಾಂಕ:02.05.2025.
6. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ಎಸಿಟಿ-6/ಗೃ.ಪ.ಭ/ 17/2022-23, ದಿನಾಂಕ:15.05.2025.

* * * * *

**ಪ್ರಸ್ತಾವನೆ :**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ನಿವೃತ್ತ ಲೋಕಾಯುಕ್ತರಾದ ನ್ಯಾ|| ಶ್ರೀ ಎನ್. ಸಂತೋಷ ಹೆಗಡೆ ಇವರಿಗೆ ನಿವಾಸ ಸೇವಕ, ವಾಹನ ಚಾಲಕ ಮತ್ತು ಸುರಕ್ಷಾ ಸಿಬ್ಬಂದಿ ಇವರುಗಳ ಸೇವೆಯನ್ನು ಪಡೆಯಲು ರೂ.25,000/- ಗಳನ್ನು ದಿನಾಂಕ: 02.08.2011 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ. ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕೇಂದ್ರ ಸರ್ಕಾರದ ಕಾನೂನು ಮತ್ತು ನ್ಯಾಯಾಂಗ ಇಲಾಖೆಯು ಮಾನ್ಯ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ವೇತನ ಮತ್ತು ಸೇವಾ ನಿಯಮಗಳಿಗೆ ತಿದ್ದುಪಡಿ ಮಾಡಿ ಗೆಜೆಟ್‌ನಲ್ಲಿ ಪ್ರಕಟಗೊಂಡಿರುವ ದಿನಾಂಕ:18.03.2021 ರಿಂದ ಅನ್ವಯವಾಗುವಂತೆ ಗೃಹ ಪರಿಚಾರಿಕೆ ಭತ್ಯೆಯನ್ನು ರೂ.25,000/- ಗಳಿಂದ ರೂ.70,000/- ಗಳಿಗೆ ಪರಿಷ್ಕರಿಸಿ ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ.

ಮುಂದುವರೆದಿದೆ....2

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ನಿವೃತ್ತ ಲೋಕಾಯುಕ್ತರಾದ ಶ್ರೀ ಪಿ. ವಿಶ್ವನಾಥ ಶೆಟ್ಟಿ ಇವರಿಗೆ ನೀಡುತ್ತಿದ್ದ ಗೃಹ ಪರಿಚಾರಕ ಭತ್ಯೆಯನ್ನು ದಿನಾಂಕ:27.01.2022 ರಿಂದ ಅನ್ವಯವಾಗುವಂತೆ ರೂ.25,000/- ಗಳಿಂದ ರೂ.70,000/-ಗಳಿಗೆ ಪರಿಷ್ಕರಿಸಿ ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದಲ್ಲಿ, ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಎನ್. ಸಂತೋಷ್ ಹೆಗಡೆ, ಇವರು ದಿನಾಂಕ:02.08.2011ರ ಅಪರಾಹ್ನದಂದು ಹಾಗೂ ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಪಿ. ವಿಶ್ವನಾಥ ಶೆಟ್ಟಿ ಇವರು ದಿನಾಂಕ:26.01.2022ರ ಅಪರಾಹ್ನದಂದು ಕರ್ನಾಟಕ ರಾಜ್ಯದ ಲೋಕಾಯುಕ್ತರಾಗಿ 5 ವರ್ಷಗಳ ಸೇವಾವಧಿಯನ್ನು ಪೂರ್ಣಗೊಳಿಸಿ ಹುದ್ದೆಯ ಕೆಲಸಕಾರ್ಯಗಳಿಂದ ನಿವೃತ್ತರಾಗಿರುತ್ತಾರೆ. ಸದರಿಯವರುಗಳಿಗೆ ಕರ್ನಾಟಕ ಲೋಕಾಯುಕ್ತ ನಿಯಮಗಳು 1985ರ ನಿಯಮ 6(1)ರ ಪ್ರಕಾರ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರವರಿಗೆ ಒದಗಿಸುವ ಸೌಲಭ್ಯಗಳ ಸಮಾನವಾಗಿ ಸೇವಾ ಷರತ್ತುಗಳಿರತಕ್ಕದ್ದೆಂದು ಇರುವುದರಿಂದ, Ministry of Law and Justice, (Department of Justice), ನವದೆಹಲಿಯವರ ದಿನಾಂಕ:26.08.2022ರ ತಿದ್ದುಪಡಿ ಅಧಿಸೂಚನೆಯಲ್ಲಿ The Supreme Court Judges Rules,1959ಕ್ಕೆ ಮಾಡಿರುವ ತಿದ್ದುಪಡಿಯನ್ವಯ ನಿವೃತ್ತ ಲೋಕಾಯುಕ್ತರುಗಳಾದ ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಎನ್. ಸಂತೋಷ್ ಹೆಗಡೆ ಹಾಗೂ ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಪಿ. ವಿಶ್ವನಾಥ ಶೆಟ್ಟಿ ಇವರುಗಳಿಗೆ ಸೌಲಭ್ಯಗಳನ್ನು ಒದಗಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ, ಸಲ್ಲಿಸಲಾಗಿರುವ ಪ್ರಸ್ತಾವನೆಯಲ್ಲಿ ಸಿಬ್ಬಂದಿ ಸಂಬಂಧಿತ ಹುದ್ದೆಗಳನ್ನು ಸೃಜಿಸಲು ಕೋರಲಾಗುತ್ತಿದೆಯೇ? ಕೋರುತ್ತಿದ್ದಲ್ಲಿ, ಸೃಜಿಸಬೇಕಾದ ಹುದ್ದೆಗಳ ಪದನಾಮ, ಸಂಖ್ಯೆ ಮತ್ತು ಸದರಿ ಹುದ್ದೆಗಳ ವೇತನ ಮತ್ತು ಇತರೆ ಸೌಲಭ್ಯಗಳಿಗೆ ತಗಲುವ ಮಾಸಿಕ ಹಾಗು ವಾರ್ಷಿಕ ವೆಚ್ಚದ ಮಾಹಿತಿ ಅಥವಾ ಪ್ರಸ್ತುತ ಪಾವತಿಸುತ್ತಿರುವ ರೂ.70,000/- ಗಳ ಮೊತ್ತವನ್ನು ಹೆಚ್ಚಿಸಬೇಕಿದ್ದಲ್ಲಿ ಎಷ್ಟು ಮೊತ್ತಕ್ಕೆ ಹೆಚ್ಚಿಸಬೇಕೆಂಬುದರ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ನಿಬಂಧಕರು, ಕರ್ನಾಟಕ ಲೋಕಾಯುಕ್ತರವರನ್ನು ಕೋರಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ಪತ್ರದಲ್ಲಿ ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರು ಪ್ರಸ್ತಾಪಿತ ವಿಷಯದಲ್ಲಿ ಸಿಬ್ಬಂದಿ ಸಂಬಂಧಿತ ಹುದ್ದೆಗಳನ್ನು ಸೃಜಿಸಲು ಕೋರಿರುವುದಿಲ್ಲ ಹಾಗೂ ಕೋರುವ ಸಂಭವ ಇರುವುದಿಲ್ಲ ಎಂದು ತಿಳಿಸುತ್ತಾ, ಗೌರವಾನ್ವಿತ ಹಿಂದಿನ ಲೋಕಾಯುಕ್ತರುಗಳಾದ ನ್ಯಾಯಮೂರ್ತಿ ಶ್ರೀ ಎನ್. ಸಂತೋಷ್ ಹೆಗಡೆ ಮತ್ತು ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ ಇವರುಗಳಿಗೆ The Supreme Court Judges Rules, 1959 ರ ನಿಯಮ 3ಬಿ(1) ರ ಪ್ರಕಾರ, ಒದಗಿಸುತ್ತಿರುವ ಸೇವೆಗಳ ಸಂಬಂಧ ಪ್ರಸ್ತುತ ಪಾವತಿಸುತ್ತಿರುವ ವೇತನ ಒಟ್ಟಾರೆಯಾಗಿ ಮಾಸಿಕ **ರೂ.70,000/- ರಿಂದ ರೂ.1,22,000/-** ಗಳಿಗೆ ಹೆಚ್ಚಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮುಂದುವರೆದಿದೆ....3

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 122 ಸೇಲೋ(ಯು) 2022**
**ಬೆಂಗಳೂರು, ದಿನಾಂಕ: 06.12.2025.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗೌರವಾನ್ವಿತ ನಿವೃತ್ತ ಲೋಕಾಯುಕ್ತರುಗಳಾದ **ನ್ಯಾಯಮೂರ್ತಿ ಶ್ರೀ ಎನ್. ಸಂತೋಷ್ ಹೆಗಡೆ ಮತ್ತು ನ್ಯಾಯಮೂರ್ತಿ ಶ್ರೀ ಪಿ. ವಿಶ್ವನಾಥ ಶೆಟ್ಟಿ** ಇವರುಗಳಿಗೆ **The Supreme Court Judges Rules, 1959ರ ನಿಯಮ 3(ಬಿ)(1)**ರ ಪ್ರಕಾರ ಒದಗಿಸುತ್ತಿರುವ ಸೌಲಭ್ಯಗಳಿಗಾಗಿ ಪ್ರಸ್ತುತ ಪಾವತಿಸುತ್ತಿರುವ **ಒಟ್ಟಾರೆ ಮಾಸಿಕ ಮೊತ್ತವನ್ನು ರೂ. 70,000/- ಗಳಿಂದ ರೂ. 1,22,000/-** ಗಳಿಗೆ ಹೆಚ್ಚಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 19 ವೆಚ್ಚ-12/ 2023, ದಿನಾಂಕ: 28.11.2025ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

**(ಕವಿತಾ ಆರ್.)**
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸುಇ (ಜಾಗೃತ ವಿಭಾಗ).

**ಇವರಿಗೆ:**

**01** ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.

**02** ಪ್ರಧಾನ ಮಹಾಲೇಖಪಾಲರು (ಇ & ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.

**03** ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001.

**04** ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**05** ಅಪರ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನ್ಯೂ ಪಬ್ಲಿಕ್ ಆಫೀಸ್ ಬಿಲ್ಡಿಂಗ್, ನೃಪತುಂಗ ರಸ್ತೆ,ಬೆಂಗಳೂರು-1.

**06** ಗೌ|| ನಿವೃತ್ತ ಲೋಕಾಯುಕ್ತರಾದ ಶ್ರೀ ಎನ್. ಸಂತೋಷ್ ಹೆಗಡೆ ಮತ್ತು ಶ್ರೀ ಪಿ. ವಿಶ್ವನಾಥ ಶೆಟ್ಟಿ ಇವರುಗಳಿಗೆ (ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಮೂಲಕ)

**07** ಶಾಖಾಧಿಕಾರಿ, ಆರ್ಥಿಕ ಇಲಾಖೆ (ವೆಚ್ಚ-12), ವಿಧಾನಸೌಧ, ಬೆಂಗಳೂರು.

**08** ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಕರ್ನಾಟಕಸರ್ಕಾರ

ಸಂಖ್ಯೆ: ಸಿಆಸುಇ 180 ಸೇಲೋಆಯು 2024

ಕರ್ನಾಟಕಸರ್ಕಾರದಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 03.11.2025

## ಅಧಿಸೂಚನೆ

ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ (1985ರ ಅಧಿನಿಯಮ 4) ಪ್ರಕರಣ 23ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಕರ್ನಾಟಕ ಲೋಕಾಯುಕ್ತ ನಿಯಮಗಳು 1985ಕ್ಕೆ ಮತ್ತಷ್ಟು ತಿದ್ದುಪಡಿಗಳನ್ನು ಮಾಡಿ ಈ ಕೆಳಕಂಡಂತೆ ನಿಯಮಗಳನ್ನು ರಚಿಸಿದೆ. ಅವುಗಳೆಂದರೆ:-

## ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ.- (1)** ಈ ನಿಯಮಗಳನ್ನು ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ನಿಯಮಗಳು 2025 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು 15ನೇ ಜೂನ್ 2022 ರಿಂದ ಜಾರಿಗೆ ಬಂದಿರುತ್ತವೆ ಎಂದು ಪರಿಭಾವಿಸತಕ್ಕದ್ದು.

**2. ನಿಯಮ 6ರ ತಿದ್ದುಪಡಿ.-** ಕರ್ನಾಟಕ ಲೋಕಾಯುಕ್ತ ನಿಯಮಗಳು, 1985ರ ನಿಯಮ 6ರ ಉಪ ನಿಯಮಗಳು (10)ರ ನಂತರ ಈ ಮುಂದಿನದನ್ನು ಸೇರ್ಪಡೆಗೊಳಿಸಲಾಗಿದೆ ಅವುಗಳೆಂದರೆ:-

"(11) ಉಪಲೋಕಾಯುಕ್ತರು ಅಧಿನಿಯಮದ ಪ್ರಕರಣ 7ರ ಉಪ ಪ್ರಕರಣ (4) ರನ್ವಯ ಮತ್ತೊಂದು ಉಪಲೋಕಾಯುಕ್ತರ ಹುದ್ದೆಯ ಪ್ರಕಾರ್ಯಗಳನ್ನು ಕನಿಷ್ಠ 10 ಕೆಲಸದ ದಿನಗಳಿಗಿಂತ ಹೆಚ್ಚಿನ ಅವಧಿಗೆ ಅಧಿಕ ಪ್ರಭಾರದಲ್ಲಿ ನಿರ್ವಹಿಸಿದ ಸಂದರ್ಭದಲ್ಲಿ ಹೆಚ್ಚುವರಿ ಹುದ್ದೆಯ ವೇತನದ ಶೇಕಡಾ 10 ರಷ್ಟರ ದರದಲ್ಲಿ ಮತ್ತು ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿದ ದರದಲ್ಲಿ ಪ್ರಭಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ."

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕವಿತಾ ಆರ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜಾಗೃತ ವಿಭಾಗ)

ಇವರಿಗೆ:

01 ಪ್ರಧಾನ ಅಕೌಂಟೆಂಟ್ ಜನರಲ್ (G&SSA), ಕರ್ನಾಟಕ, ಹೊಸಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ.5398, ಬೆಂಗಳೂರು -560001.

02 ಪ್ರಧಾನ ಅಕೌಂಟೆಂಟ್ ಜನರಲ್ (E&RSA), ಕರ್ನಾಟಕ, ಹೊಸಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ.5398, ಬೆಂಗಳೂರು -560001.

03 ಪ್ರಧಾನ ಅಕೌಂಟೆಂಟ್ ಜನರಲ್ (A&E), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ.5329, ಬೆಂಗಳೂರು -560001.

04 ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.

05 ಮುಖ್ಯ ಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.

06 ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ವಿಧಾನಸೌಧ, ಬೆಂಗಳೂರು.

07 ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಅಂಬೇಡ್ಕರ್ ವೀಧಿ, ಬೆಂಗಳೂರು.

08 ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು.

09 ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು-2), ವಿಧಾನಸೌಧ, ಬೆಂಗಳೂರು.

10 ಸರ್ಕಾರದ ಉಪ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ಇಲಾಖೆ, ವಿಧಾನಸೌಧ, ಬೆಂಗಳೂರು

11 ಶಾಖಾರಕ್ಷಾ ಕಡತ / ಬಿಡಿಪ್ರತಿಗಳು.